ಅನಂತರ ನಾಲ್ಕಾರು ತಿನ್ನುತ್ತಿದ್ದಳು. ಆದರೂ ಅವಳಿಗೋಸ್ಕರ ನಿತ್ಯ ಚಪಾತಿ, ಪಲ್ಯ, ಅನ್ನ, ಸಾಂಬಾರ್ ಮಾಡಲೇಬೇಕಿತ್ತು. ಹೀಗಾಗಿ, ನಮಗೂ ಬೇರೆ ಆಯ್ಕೆ ಇರಲಿಲ್ಲ. ಇನ್ನೊಂದು ದಿನ ಏನೋ ಕಾರಣಕ್ಕೆ ಪಲ್ಯ ಅವಳ ಮಟ್ಟಕ್ಕೆ ಸ್ವಲ್ಪ ಕಡಿಮೆಯಾಯಿತು. "ಉಪ್ಪಿನಕಾಯಿ ಹಾಕುತ್ತೇನೆ. ಉತ್ತರ ಭಾರತದಲ್ಲೆಲ್ಲ ನೀವು ಉಪ್ಪಿನಕಾಯಿಯ ಜೊತೆಗೆ ರೋಟಿ ತಿನ್ನುತ್ತೀರಲ್ಲ..." ಎಂದೆ. "ನಹಿ... ಹಮ್ ಖಟ್ಟಾ ನಹಿ ಖಾತೆ (ನಾನು ಹುಳಿ ಪದಾರ್ಥ ತಿನ್ನುವುದಿಲ್ಲ)" ಎಂದಳು. ನಾನು ದೊಡ್ಡಸ್ತಿಕೆಯ ಪೋಸು ಕೊಡುತ್ತ, "ಹಾಗಾದರೆ ಚಪಾತಿಯ ಜೊತೆಗೆ ಏನು ಕೊಡಲಿ? ಏನು ತಿಂದು ಅಭ್ಯಾಸವಿದೆ ನಿನಗೆ?" ಎಂದು ಪ್ರೀತಿಯಿಂದ ಕೇಳಿದ್ದು ಮುಳುವಾಯಿತು ನೋಡಿ. ತಕ್ಷಣ "ಘೀ ಶಕ್ಕರ್" ಎಂದಳು. ನಾನು ಬೆರಗಾಗಿ ಬಾಯ್ತೆರೆದೆ. "ಹೌದು ದೀದಿ. ಒಂದು ಕಟೋರಿ ತುಂಬ ಘೀ ಶಕ್ಕರ್ ಕೊಟ್ಟುಬಿಡಿ. ಪಲ್ಯ ಇಲ್ಲದಾಗ ನಾವು ಅದನ್ನೇ ತಿನ್ನುತ್ತಿದ್ದೆವು" ಎಂದಳು. ಅವಳಿಗೆ ದೊಡ್ಡ ಬಟ್ಟಲು ತುಂಬ ತುಪ್ಪ, ಸಕ್ಕರೆ ಕೊಡುವ ಮನಸ್ಸು ನನಗೆ ಬರಲಿಲ್ಲ ಬಿಡಿ. ಸರಸರನೆ ಈರುಳ್ಳಿ ಕತ್ತರಿಸಿ ಪಲ್ಯ ಮಾಡಿ ಕೊಟ್ಟೆ. ಆದರೆ, ಅವಳು ಕಣ್ಣುಗಳನ್ನರಳಿಸಿ, "ಘೀ ಶಕ್ಕರ್" ಎಂದು ಕೇಳಿದ್ದು ಮಾತ್ರ ನೆನಪಿನಲ್ಲುಳಿಯಿತು.

ಅದೊಂದು ದಿನ... ತಾನಾಗೇ ತನ್ನ ಗತ ಜೀವನವನ್ನು ತೆರೆದಿಟ್ಟಳು. ಭುವನೇಶ್ವರದಲ್ಲೇ ಗುಡಿಸಲುಗಳಲ್ಲಿ ಅವರ ವಾಸ. ನಾಲ್ಕು ಜನ ಅಕ್ಕ ತಂಗಿಯರು ಮತ್ತು ಮೂರು ಜನ ಅಣ್ಣಂದಿರು. ಬಡತನವನ್ನೇ ಹಾಸಿ ಹೊದ್ದುಕೊಳ್ಳುವುದು. ಅಣ್ಣಂದಿರು... ಅಪ್ಪ ದಿನಗೂಲಿ ಕಾರ್ಮಿಕರಾಗಿ ದುಡಿಯುತ್ತಿದ್ದರು. ದುಡಿದದ್ದನ್ನೆಲ್ಲ ಕುಡಿತಕ್ಕೆ ಹಾಕಿ ಬರಿಗೈಲಿ ಮರಳುತ್ತಿದ್ದರು. ಹೆಂಗಸರು ಅವರಿವರ ಮನೆಗಳಲ್ಲಿ ಮನೆಗೆಲಸ ಮಾಡಿಯೇ ಹೊಟ್ಟೆ ಹೊರೆಯಬೇಕಿತ್ತು. ಒಪ್ಪೊತ್ತಾದರೂ ಮನೆಯವರ ಹೊಟ್ಟೆ ತುಂಬಿಸಬೇಕಿತ್ತಲ್ಲ. ಇದು ಭಾರತದಲ್ಲಿ ಬಡತನ ರೇಖೆಯ ಕೆಳಗಿರುವ, ಸ್ಲಮ್‌ಗಳಲ್ಲಿರುವ ಬಹುತೇಕರ ಕಥೆ. ಊರು ಭಾಷೆ ಬೇರೆಯಾಗಬಹುದು. ಪರಿಸ್ಥಿತಿ ಮಾತ್ರ ಒಂದೇ. ಸಾಲಸೋಲ ಮಾಡಿ ಒಬ್ಬ ಅಕ್ಕನ ಮದುವೆ ಮಾಡಿದ್ದಷ್ಟೇ. ಉಳಿದವರದು ಸಾಧ್ಯವಾಗಲೇ ಇಲ್ಲ. ಅವಳ ಸಾಲ ತೀರಲೇ ಇಲ್ಲವಲ್ಲ. ಆಗ ಮಧ್ಯಪ್ರದೇಶದಲ್ಲಿ ವಧುಗಳ ಕೊರತೆ. ಕೃಷಿ ಕುಟುಂಬಕ್ಕಂತೂ ಹೆಣ್ಣು ದೊರಕುವುದು ಮಹಾಕಷ್ಟ. ಇವಳ ಗಂಡನ ಕುಟುಂಬದವರು ಒಂದಷ್ಟು ದುಡ್ಡು ಕೊಟ್ಟು ಇವಳನ್ನು ಮದುವೆ ಮಾಡಿಕೊಂಡು ಹೋದರು. ಆದರೆ, ಸರಿಯಾಗಿ ನೋಡಿಕೊಳ್ಳಲಿಲ್ಲ. ಇವಳಿಗೆ ಹೊಂದಿಕೊಳ್ಳಲೂ ಆಗಲಿಲ್ಲ. ಬರಗಾಲ ಬಂದಾಗ ಕೃಷಿಯೂ ಸಾಗದೇ ಇವಳ ಗಂಡ ಕೂಲಿ ಕೆಲಸಕ್ಕೆ ಪಟ್ಟಣಕ್ಕೆ ಹೊರಟು ಹೋದ. ಆರು ತಿಂಗಳಿಗೊಮ್ಮೆ ಬರುತ್ತಿದ್ದ. "ನನಗೆ... ನನ್ನ ಮಕ್ಕಳಿಗೆ ಸರಿಯಾಗಿ ಹೊಟ್ಟೆ, ಬಟ್ಟೆಗೆ ಕೊಡದಿದ್ದರೆ ಅಲ್ಲಿದ್ದು ಮಾಡುವುದಾದರೂ ಏನು?" ಎಂದು ಆಕ್ರೋಶದಿಂದ ಹೇಳಿದಳು. ನಿಜವೆನಿಸಿ ಸಂತಾಪ ವ್ಯಕ್ತಪಡಿಸಿದರೂ ಮನಸ್ಸಿನ ಒಳಮೂಲೆಯಲ್ಲಿ 'ಇವಳು ತಿನ್ನುವ ಪರಿಗೆ ಅವರಾದರೂ ಎಷ್ಟು ಹಾಕಿಯಾರು?' ಎಂದುಕೊಂಡೆ. ಎರಡನೇ ಹೆರಿಗೆಗೆ ತವರಿಗೆ ಬಂದವಳು ಮತ್ತೆ ಅತ್ತೆಮನೆಯ ಹೊಸಲು ತುಳಿಯಲಿಲ್ಲ. ಇವಳಮ್ಮ ಮಕ್ಕಳನ್ನು ನೋಡಿಕೊಂಡರೆ, ಇವಳು ನಾಲ್ಕಾರು ಮನೆಗೆಲಸ ಮಾಡುತ್ತಿದ್ದಳು. ಎಷ್ಟಾದರೂ ದೊರೆಯುತ್ತಿದ್ದುದು ಮೂರು ಮೂರೂವರೆ ಸಾವಿರ ರೂಪಾಯಿಗಳು. ಇಲ್ಲಿ ಇವರು ಹತ್ತು ಸಾವಿರ ರೂಪಾಯಿಗಳನ್ನು ಇವಳಮ್ಮನಿಗೆ ಕಳುಹಿಸುತ್ತಿದ್ದರಂತೆ. ಅವರ ಪಾಲಿಗೆ ದೊಡ್ಡ ಮೊತ್ತವೇ. ಮಕ್ಕಳೂ ಅಜ್ಜಿಯ ಆರೈಕೆಯಲ್ಲಿದ್ದು ಓದುತ್ತಿದ್ದವು. ದಿನವೂ ಮಾತನಾಡಿ, "ಬರುವಾಗ ನಮಗೇನು ತರ್ತೀಯಾ?" ಎಂದು ಕೇಳುವುದಿತ್ತು. ನಿತ್ಯವೂ ಎರಡು ಬಾರಿಯಾದರೂ ಅವಳ ಅಣ್ಣನಿಗೆ ವಿಡಿಯೊ ಕಾಲ್ ಮಾಡಿ ಮಕ್ಕಳೊಡನೆ ಮಾತನಾಡಲು ಕೊಡಬೇಕಿತ್ತು. ಅವಳ ಬಂಧುಬಳಗದವರಿಗೆಲ್ಲ ಕಾಲ್ ಮಾಡಿಕೊಡಬೇಕಾಗಿತ್ತು. ಇದರಲ್ಲಿ ಕೊಂಚ ಏರುಪೇರಾದರೂ ಪಾತ್ರೆಗಳು ಸಿಕ್ಕಾಪಟ್ಟೆ ಸದ್ದು ಮಾಡುತ್ತಿದ್ದವು.

ಇತ್ತೀಚೆಗೆ ವಾಚಾಳಿಯಂತೆ ಮಾತನಾಡುವ ನಂದಿನಿ ಗಂಡಸರನ್ನು ಕಂಡರೆ ಮಾರುದೂರ